# ಕೈಲಾಸ ಯಾತ್ರೆಯ ಅನುಭವಗಳು

**ಸ್ವಾಮಿ ಅನುಪಮಾನಂದ**

ಪರಶಿವನ ನಿವಾಸವಾಗಿರುವ ಕೈಲಾಸ-ಮಾನಸ ಸರೋವರ ಯಾತ್ರೆ ಹಿಂದೊಂದು ಕಾಲಕ್ಕೆ ಜನಸಾಮಾನ್ಯರಿಗೆ ಅಸಾಧ್ಯವೇ ಆಗಿತ್ತು; ಆದರೂ ಅನೇಕ ಮಂದಿ ಸಾಧುಸಂತರು, ಭಕ್ತರು ಈ ಅತಿ ಪವಿತ್ರ ಪರ್ವತವನ್ನು ಸಂದರ್ಶಿಸಲು ಸಾಹಸಯಾತ್ರೆ ಮಾಡಿದ್ದಾರೆ. ಇತ್ತೀಚೆಗೆ ಪ್ರಯಾಣದ ಸೌಕರ್ಯಗಳು ಹೆಚ್ಚಿದಂದತೆ ಈ ಯಾತ್ರೆ ಜನಪ್ರಿಯವಾಗುತ್ತಿದೆ. ಲೇಖಕರು ತಮ್ಮ ಅನುಭವಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಪೂಜ್ಯ ಸ್ವಾಮೀಜಿಯವರು ಚಂಡೀಗಢ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸನಾತನ ಧರ್ಮದಲ್ಲಿ ತೀರ್ಥಯಾತ್ರೆಗೆ ಬಹಳ ಮಹತ್ವದ ಸ್ಥಾನವಿದೆ. ಮಹಾತ್ಮರು ಎಲ್ಲರೂ ಕೂಡ ತೀರ್ಥಯಾತ್ರೆಗೆ ತುಂಬ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಶ್ರೀರಾಮಕೃಷ್ಣರು ಕಾಶಿ, ಬೃಂದಾವನ, ದೇವಘರ್ ಇಲ್ಲೆಲ್ಲ ತೀರ್ಥಯಾತ್ರೆಗೆ ಹೋಗಿದ್ದನ್ನು ನೋಡುತ್ತೇವೆ. ಶಾರದಾಮಾತೆಯವರು ಕೂಡ ಕಾಶಿ, ಬೃಂದಾವನ ಇಲ್ಲೆಲ್ಲ ತೀರ್ಥಯಾತ್ರೆಗೆ ಹೋಗಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ಜೀವನದಲ್ಲಿ ಸಾಕಷ್ಟು ತೀರ್ಥಕ್ಷೇತ್ರಗಳನ್ನು ನೋಡಿದ್ದಲ್ಲದೆ, ನಂತರ ತಮ್ಮ ತಾಯಿಯವರನ್ನೂ ಕೂಡ ಕಾಮಾಖ್ಯ ಮುಂತಾದ ತೀರ್ಥಕ್ಷೇತ್ರಗಳಿಗೆ ಕರೆದುಕೊಂಡು ಹೋಗಿದ್ದರು. ಹಾಗಾಗಿ ಸನಾತನ ಸಂಸ್ಕೃತಿಯಲ್ಲಿ, ಹಿಂದೂಧರ್ಮದಲ್ಲಿ ತೀರ್ಥಯಾತ್ರೆಗೆ ಬಹಳ ಮಹತ್ವದ ಸ್ಥಾನವಿದೆ. ಅಲ್ಲಿ ಭಗವಂತನ ಸ್ಮರಣೆ, ತಪಸ್ಸು, ಇವೆಲ್ಲವನ್ನು ನೋಡುತ್ತೇವೆ. ಹಿಂದೂಗಳಿಗೆ ಕಾಶಿ, ತ್ರಿವೇಣಿ ಸಂಗಮ, ಹರಿದ್ವಾರ, ಅದೇರೀತಿ ಸೋಮನಾಥ, ದ್ವಾರಕ, ಪುರಿ, ದಕ್ಷಿಣದಲ್ಲಿ ಗೋಕರ್ಣ, ಕಂಚಿ, ರಾಮೇಶ್ವರ ಈ ರೀತಿಯಾಗಿ ಸಾಕಷ್ಟು ತೀರ್ಥಕ್ಷೇತ್ರಗಳವೆ. ಅದೇ ರೀತಿ ಕೈಲಾಸ ಕೂಡಾ ಪುರಾಣಕಾಲದಿಂದಲೂ ಪ್ರಸಿದ್ಧವಾಗಿರುವ ತೀರ್ಥಕ್ಷೇತ್ರ . ಹಿಂದೆ ಭಾರತದ ಭಾಗವಾಗಿದ್ದ ಕೈಲಾಸ ಈಗ ಟಿಬೆಟ್‌ನಲ್ಲಿ ಇದೆ. ೧೯೬೦ರ ಸಮಯದಲ್ಲಿ ಚೀನಿಯರು ಟಿಬೆಟನ್ನು ಆಕ್ರಮಿಸಿದ್ದರಿಂದ ಈಗ ಅದು ಚೀನಾದಲ್ಲಿ ಇದೆ. ಕೈಲಾಸ, ಅದರ ಜೊತೆಗೆ ಮಾನಸ ಸರೋವರ ಬಹಳ ಪ್ರಾಚೀನ ಕಾಲದಿಂದಲೇ ಮಹತ್ವದ ಸ್ಥಾನವನ್ನು ಪಡೆದಿದೆ.

ಈ ಕೈಲಾಸ ತೀರ್ಥಯಾತ್ರೆಗೆ ಹೋಗುವ ಭಾಗ್ಯ ನನಗೆ ೨೦೦೪ರಲ್ಲಿ ಲಭಿಸಿತು. ಆಗ ಮುಂಬೈನಲ್ಲಿ ಇದ್ದ ಸ್ವಾಮಿ ಧ್ರುವೇಶಾನಂದಜಿಯವರು ಕೆಲವು ಭಕ್ತರ ಜೊತೆಗೆ ಕೈಲಾಸಯಾತ್ರೆಗೆ ಹೊರಟಿದ್ದರು. ಅವರ ಜೊತೆಗೆ ಸೇರಿಕೊಂಡು ಕೈಲಾಸ ಯಾತ್ರೆ ಮಾಡುವ ಅವಕಾಶ ನನಗೆ ಸಿಕಿತು. ಹೀಗಾಗಿ ೨೦೦೪ ಆಗಸ್ಟ್ ತಿಂಗಳಲ್ಲಿ ಮಂಗಳೂರಿನಿಂದ ನಾನು ಮುಂಬೈಗೆ ಹೋಗಿ, ಅಲ್ಲಿಂದ ಸ್ವಾಮಿ ಧ್ರುವೇಶಾನಂದಜಿ ಹಾಗೂ ಕೆಲವು ಭಕ್ತರ ಜೊತೆಗೆ ಸೇರಿಕೊಂಡು ದೆಹಲಿಗೆ ಹೋಗಿ, ಅಲ್ಲಿಂದ ಕಾತ್ಮಂಡುವಿಗೆ ಹೋದೆ. ಕಾತ್ಮಂಡುವಿನಲ್ಲಿ ಪುರಾಣ ಪ್ರಸಿದ್ಧವಾದ ಪಶುಪತಿನಾಥ ದೇವಾಸ್ಥಾನವಿದೆ. ಅಲ್ಲಿ ಶಿವನ ದರ್ಶನವನ್ನು ಮಾಡಿಕೊಂಡು, ಅಲ್ಲಿಂದ ಗುಹ್ಯೇಶ್ವರಿಯ ದರ್ಶನ ಮಾಡಿದೆವು.



ಇನ್ನೊಂದು ವಿಶೇಷವೇನೆಂದರೆ ಕಾತ್ಮಂಡುವಿನಲ್ಲಿ ಕುಮಾರಿ ಜೀವಂತ ದೇವತೆ. ಅವಳಿಗೆ ಬಹಳ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಒಬ್ಬ ಬಾಲಕಿಯನ್ನು ದೇವಿ ಎಂದು ಅವರು ಪೂಜಿಸುತ್ತಾರೆ. ಹೀಗೆ ಇವನ್ನೆಲ್ಲ ದರ್ಶನ ಮಾಡಿಕೊಂಡು ಕಾತ್ಮಂಡುವಿನಿಂದ ನಾವು ಲ್ಹಾಸಾಗೆ ಹೋದೆವು. ಲ್ಹಾಸಾ ಟಿಬೆಟಿನ ರಾಜಧಾನಿ. ಅಲ್ಲಿ ದಲೈಲಾಮಾ ಕೂಡ ಇರುತ್ತಿದ್ದರು. ಆದರೆ ಟಿಬೆಟ್ಟನ್ನು ಚೈನಾ ಆಕ್ರಮಿಸಿಕೊಂಡ ಮೇಲೆ ೧೯೫೯ರಲ್ಲಿ ಅವರು ಪಲಾಯನ ಮಾಡಿ ಭಾರತಕ್ಕೆ ಬಂದರು. ಭಾರತ ಅವರಿಗೆ ಆಶ್ರಯ ಕೊಟ್ಟಿರುವುದರಿಂದ ಹಿಮಾಚಲ ಪ್ರದೇಶದ ಧರ್ಮಶಾಲೆಯಲ್ಲಿ ಅವರು ತಮ್ಮ ಮಠ ಇತ್ಯಾದಿಗಳನ್ನೆಲ್ಲ ಕಟ್ಟಿಕೊಂಡಿದ್ದಾರೆ. ಲ್ಹಾಸಾದಲ್ಲಿ ಪೋಟಾಲ ಪ್ಯಾಲೇಸ್‌ನಲ್ಲಿ ದಲೈಲಾಮ ಅವರು ರಾಜ್ಯವನ್ನು ಆಳುತ್ತಿದ್ದರು. ಅದು ಅವರ ಅರಮನೆಯೂ ಕೂಡ ಆಗಿತ್ತು. ಅಲ್ಲಿ ಆ ಅರಮನೆಯಲ್ಲಿ ಸಾಕಷ್ಟು ಬುದ್ಧನ ಬೇರೆಬೇರೆ ರೂಪದ ದೊಡ್ಡ ದೊಡ್ಡ ಮೂರ್ತಿಗಳಿವೆ. ಅಲ್ಲೇ ದಲೈಲಾಮಾ ಅವರ ಒಂದು ಸಮ್ಮರ್ ಪ್ಯಾಲೇಸ್ ಅಂದರೆ ಬೇಸಿಗೆಯಲ್ಲಿ ವಾಸ ಮಾಡುವ ಅರಮನೆ ಕೂಡ ಇದೆ. ಕಾತ್ಮಂಡುವಿನ ವಿಶೇಷತೆಯೇನೆಂದರೆ ಅದು ಸಮುದ್ರ ಮಟ್ಟದಿಂದ ೧೨,೦೦೦ ಅಡಿ ಎತ್ತರದಲ್ಲಿದೆ. ಅಲ್ಲಿ ಸಾಕಷ್ಟು ಮಠಗಳಿವೆ, ದೇವಸ್ಥಾನಗಳಿವೆ. ಜೋಕಾಂಗ್ ಎಂಬ ದೇವಸ್ಥಾನವಿದೆ. ಸೇರಾ ಮಠ, ಧ್ರಿಪಂಗ್ ಮಠ, ಗ್ಯಂಡೆನ್ ಮಠ ಇತ್ಯಾದಿ. ಅಲ್ಲಿ ಈಗಲೂ ಕೂಡ

ಬೌದ್ಧ ಸಂನ್ಯಾಸಿಗಳು ಇದ್ದಾರೆ. ಹಾಗಾಗಿ ಅವರ ದರ್ಶನವನ್ನು ಮಾಡಿಕೊಂಡು, ಅಲ್ಲಿಂದ ರಸ್ತೆ ಮೂಲಕ ಪಶ್ಚಿಮಾಭಿಮುಖವಾಗಿ ಕೈಲಾಸದ ಕಡೆಗೆ ನಾವು ಹೊರಟೆವು. ಅಲ್ಲಿ ಲ್ಹಾಸಾದಿಂದ ಮೊದಲು ನಾವು ಬಂದಿದ್ದು ಶಿಗಟ್ಸೆಗೆ. ಅಲ್ಲಿ ಕೂಡ ತಾಶಿ ಲುಂಗ್ಪೋ ಅಂತ ಮಠವಿದೆ. ಅದಾದ ಮೇಲೆ ಶಾಕ್ಯಮಠ ಎಂಬ ಮಠ ಇದೆ. ಶಿಗಟ್ಸೆಯ ವಿಶೇಷವೇನೆಂದರೆ ಚೀನಾದೇಶದ ಕಡೆಯಿಂದ ಯಾರಾದರೂ ಎವರೆಸ್ಟ್ ಹತ್ತಬೇಕಾದರೆ ಅಲ್ಲಿಂದ ಪ್ರಾರಂಭಮಾಡುತ್ತಾರೆ. ಅದಾದ ಮೇಲೆ ನಾವು ಅಲ್ಲಿಂದ ಮುಂದೆ ಸಾಗ ಎಂಬ ಸ್ಥಳಕ್ಕೆ ಹೋದೆವು. ಇಲ್ಲೆಲ್ಲ ಯಾಕೆ ಹೋದೆವು ಎಂದರೆ, ಒಂದೊಂದು ಕೂಡ ಏಳು-ಎಂಟು ಗಂಟೆಗಳ ಪ್ರಯಾಣ. ರಾತ್ರಿ ತಂಗಲು ಇಲ್ಲಿ ನಿಂತೆವು. ಸಾಗದಿಂದ ಕೈಲಾಸದ ಕಡೆಗೆ ಹೊರಟರೆ ಹೋರೆ ಎಂಬ ಸ್ಥಳದಲ್ಲಿ ಪ್ರಥಮವಾಗಿ ಕೈಲಾಸದ ದರ್ಶನವಾಗುತ್ತದೆ. ಅಲ್ಲಿ ಬಹಳ ಸಂತೋಷವಾಗುತ್ತದೆ. ಏಕೆ ಎಂದರೆ ಇಲ್ಲಿಂದ ಹೊರಟು, ಗಾಡಿಯಲ್ಲಿ ಹೋಗುತ್ತಾ ಇದ್ದರೂ, ಸಾಕಷ್ಟು ದಿನಗಳಾಗಿರುತ್ತದೆ. ಅದಲ್ಲದೆ ಎತ್ತರದ ಪ್ರದೇಶದಲ್ಲಿ ಇಲ್ಲಿಂದ ಹೋದವರಿಗೆ ಬೇರೆ ಬೇರೆಯ ರೀತಿಯ ಕಷ್ಟಗಳುಂಟಾಗುತ್ತದೆ. ಹೀಗಾಗಿ ಕೈಲಾಸ ಪತಿಯ ದರ್ಶನವಾದಾಗ ಬಹಳ ಸಂತೋಷವಾಯಿತು. ಮುಂದೆ ಮಾನಸ ಸರೋವರದ ತೀರದಲ್ಲಿ ಚ್ಯು ಗುಂಪಾ ಎಂಬ ಒಂದು ಮಠ ಇದೆ. ಆ ಮಠದ ಪಕ್ಕದಲ್ಲಿ ವಾಸಮಾಡಿದೆವು.

ಮಾನಸ ಸರೋವರ ಇರುವುದು ೧೫,೦೦೦ ಎತ್ತರದಲ್ಲಿ. ಅದರ ಸುತ್ತಳತೆ ೮೮ ಕಿ. ಮೀಟರ್. ಮಾನಸ ಸರೋವರವು ಕೂಡ ಪುರಾಣ ಪ್ರಸಿದ್ಧವಾದುದು. ಇಗಲೂ ಕೂಡ ರಾತ್ರಿ ಹೊತ್ತು ದೇವತೆಗಳು ಸ್ನಾನಕ್ಕೆ ಬರುತ್ತಾರೆ ಎಂಬ ಪ್ರತೀತಿ ಇದೆ. ಅದಕ್ಕೆ ನಿದರ್ಶನವೆಂಬಂತೆ ರಾತ್ರಿ ನೋಡುವಾಗ ನಕ್ಷತ್ರಗಳು ಒಂದೊಂದೇ ಬೀಳುವಂತೆ ಕಾಣುತ್ತವೆ. ಬಹಳ ವಿಶಾಲವಾಗಿರುವಂತಹ ಸರೋವರ ಸಮುದ್ರದಷ್ಟು ದೊಡ್ಡದಿದೆ. ಅಲ್ಲಿ ನಾವು ಸ್ನಾನ ಮಾಡಿ, ಆಮೇಲೆ ಅದರ ತೀರದಲ್ಲಿ ಒಂದು ಹೋಮವನ್ನು ಕೂಡ ಮಾಡಿದೆವು. ಬೊಂಬಾಯಿಯಿಂದ ಸ್ವಾಮಿ ಧ್ರುವೇಶಾನಂದರು ಹೋಮಕ್ಕೆ ಬೇಕಾಗಿರುವ ಹೋಮಕುಂಡ, ಸಮಿತ್ತು , ಬಿಲ್ವಪತ್ರೆ , ಹೂವುಗಳು ಎಲ್ಲವನ್ನೂ ತಂದಿದ್ದರು. ಅಲ್ಲಿ ಹೋಮ ಮಾಡಿದೆವು. ಆಮೇಲೆ ಒಂದು ದಿನ ಇದ್ದು, ಮಾನಸ ಸರೋವರದಲ್ಲಿ ಸ್ನಾನ ಇತ್ಯಾದಿಗಳನ್ನು ಮುಗಿಸಿಕೊಂಡು ನಂತರ ಕೈಲಾಸದ ಕಡೆಗೆ ಹೊರಟೆವು. ಮಾನಸ ಸರೋವರದ ವೈಶಿಷ್ಟ್ಯವೆಂದರೆ ಸುಮಾರು ಅದರ ಸುತ್ತಮುತ್ತ ೩-೪ ನದಿಗಳು ಹುಟ್ಟುತ್ತವೆ. ಅವುಗಳು ೧) ಸಟ್ಲೆಜ್ ೨) ಬ್ರಹ್ಮಪುತ್ರ - ಟಿಬೇಟಿನ ಮೂಲಕ ಹರಿದು ಕೊನೆಗೆ ಅಸ್ಸಾಮಿನಲ್ಲಿ ಭಾರತವನ್ನು ಪ್ರವೇಶ ಮಾಡಿ, ಅಲ್ಲಿಂದ ಬಂಗಾಳಕೊಲ್ಲಿ ಸೇರುತ್ತದೆ. ೩) ಸಿಂಧೂ ನದಿ : ಇಲ್ಲಿ ಹುಟ್ಟಿ ಅದು ಅಲ್ಲಿಂದ ಪಾಕಿಸ್ತಾನಕ್ಕ ಹೋಗಿಬಿಡುತ್ತದೆ. ೪) ಕರ್ನಾಲಿ ನದಿ ಕೂಡ ಅಲ್ಲಿಂದ ಬಂದು ಗಂಗಾನದಿಯನ್ನು ಸೇರಿಕೊಳ್ಳುತ್ತದೆ. ಇವುಗಳ ಉಗಮಸ್ಥಾನ ಆ ಮಾನಸ ಸರೋವರದ ಸುತ್ತ ಮುತ್ತ ಇವೆ. ಒಂದು ವಿಶೇಷತೆ - ಮಾನಸಸರೋವರದ ವಿಭಾಗದಲ್ಲಿ ಪ್ರಕೃತಿ ಬಹಳ ಶಾಂತವಾಗಿ



ರುತ್ತದೆ. ಅದಾದ ಮೇಲೆ ಚಳಿ. ಮಾನಸ ಸರೋವರದಲ್ಲಿ ಸ್ನಾನ ಮಾಡುವುದೆಂದರೆ ಒಂದು ಸಲ ನಾವು ಮುಳುಗು ಹಾಕಿದರೆ, ಚರ್ಮದ ಸ್ಪರ್ಶಜ್ಞಾನ ಹೋಗಿಬಿಡುತ್ತದೆ. ದೇಹ ಮರಗಟ್ಟುತ್ತದೆ. ಅದಾದ ಮೇಲೆ ನಮ್ಮನ್ನು ಕರೆದುಕೊಂಡು ಹೋದವರು ಅಂದರೆ ಕಾಠ್ಮಂಡುವಿನ eco-trek ಎಂಬ ಟ್ರಾವೆಲ್ ಏಜೆನ್ಸಿ, ಅವರು ನಮ್ಮನ್ನು ಕರೆದುಕೊಂಡು ಹೋದರು. ಮಾನಸ ಸರೋವರದಲ್ಲಿ ಸ್ನಾನ ಮಾಡಿ ಬಂದ ಮೇಲೆ ಸ್ನಾನ ಮಾಡುವುದಕ್ಕೆ ಬಿಸಿನೀರು ತಯಾರು ಮಾಡಿ ಇಟ್ಟಿದ್ದರು. ಹೀಗಾಗಿ ಮತ್ತೆ ಸ್ನಾನ ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಬಹಳ ಕಷ್ಟವಾದೀತು. ಹೀಗಾಗಿ ಇಲ್ಲಿ ಸ್ನಾನ ಮಾಡಿದ ಜಪ, ಧ್ಯಾನ ಮಾಡಿ ಹೋಮವನ್ನು ಮಾಡಿ, ಎಲ್ಲ ಮುಗಿಸಿ, ಮರುದಿವಸ ಕೈಲಾಸದ ಕಡೆ ಹೊರಟೆವು. ಮಾನಸ ಸರೋವರದಿಂದ ಕೈಲಾಸದ ಕಡೆಗೆ ಹೋಗುವಾಗ ಸಿಗುವ ಮೊದಲನೆಯ ಜಾಗ ದಾರ್‌ಚೆನ್. ಕೈಲಾಸ ಯಾತ್ರೆಯ ಪರಿಕ್ರಮಕ್ಕೆ ಬೇಸ್‌ಕ್ಯಾಂಪ್ ಅದು ಎಂದು ಹೇಳುತ್ತಾರೆ. ಅಲ್ಲಿ ಒಂದು ಕಟ್ಟಡ ಇದೆ. ಅಲ್ಲಿ ನಮಗೆ ವಾಸ ಮಾಡಲು ಒಂದು ವ್ಯವಸ್ಥೆ ಮಾಡಲಾಯಿತು. ಆಮೇಲೆ ಅಲ್ಲಿ ಒಂದು ದಿವಸವಿದ್ದು, ವಿಶ್ರಾಂತಿ ತೆಗೆದುಕೊಂಡು ಅದಾದ ಮೇಲೆ ಕೈಲಾಸ ಪರಿಕ್ರಮ ಮಾಡಬೇಕು. ಪರಿಕ್ರಮ ಸುಮಾರು ೬೦ ಕಿ.ಮೀ. ಸುತ್ತಳತೆಯಿದೆ. ಆ ಪರಿಕ್ರಮದ ದಾರಿಯಲ್ಲಿ ಬೆಟ್ಟಗಳ ಮಧ್ಯದಲ್ಲಿ ಹೋದರೆ ಅಷ್ಟಪಾದ ಸಿಗುವುದು. ಅದು ಕೈಲಾಸ ಪರ್ವತಕ್ಕೆ ಸಮೀಪ. ಕೈಲಾಸ ಪರ್ವತವನ್ನು ಯಾರೂ ಹತ್ತುವುದಿಲ್ಲ. ಆದರೆ ಅದರ ಸಮೀಪ ಮಾತ್ರ ಹೋಗಬಹುದು. ಅದು ಒಂದು ತೀರ್ಥಕ್ಷೇತ್ರ ಕೂಡ. ಅಷ್ಟಪಾದ ಪುರಾಣ ಪ್ರಸಿದ್ಧವಾದ ಸ್ಥಳ. ಅಲ್ಲಿಯೂ ಕೂಡ ನಾವು ಹವನವನ್ನು ಮಾಡಿದೆವು. ಜಪ, ಧ್ಯಾನಗಳನ್ನೆಲ್ಲ ಮಾಡಿದೆವು. ಅಲ್ಲಿಂದ ಕೈಲಾಸ ಪರ್ವತದ ದಕ್ಷಿಣ ಮುಖ ಬಹಳ ಸುಂದರವಾಗಿ ಕಾಣುತ್ತದೆ. ಕೈಲಾಸಪತಿಯ ಪಕ್ಕದಲ್ಲಿ ನಂದಿಯಿದೆ. ನಂದಿ ಬೆಟ್ಟ ಅಥವಾ ನಂದಿ ಎಂದು ಅದನ್ನು ಕರೆಯುತ್ತಾರೆ. ಕೈಲಾಸ ಎಂದರೆ ಅದು ಒಂದು ಪರ್ವತ. ಈ ಪರ್ವತದ ವಿಶೇಷತೆ ಏನೆಂದರೆ ೩೬೫ ದಿವಸವೂ ಅದರ ಮೇಲೆ ಹಿಮ ಆವರಿಸಿರುತ್ತದೆ. ಸುತ್ತ ಮುತ್ತ ಇರುವ ಬೇರೆ ಎಷ್ಟೋ ಪರ್ವತಗಳು ಬೇಸಿಗೆಯಲ್ಲಿ ಹಿಮವಿಲ್ಲದೆ ಖಾಲಿಯಾಗಿರುತ್ತವೆ. ಆದರೆ ಕೈಲಾಸ ಪರ್ವತ ಮಾತ್ರ ಯಾವಾಗಲೂ, ವರ್ಷದ ೩೬೫ ದಿವಸವೂ ಕೂಡ ಹಿಮಾಚ್ಛಾದಿತವಾಗಿರುತ್ತದೆ. ಶ್ವೇತವರ್ಣದಿಂದ ಸುಂದರವಾಗಿ ಎಷ್ಟೋ ದೂರದಿಂದ ಕಂಡುಬರುತ್ತದೆ, ಕೈಲಾಸ ಪರ್ವತ. ಹಾಗಾಗಿ ಅಷ್ಟಪಾದಕ್ಕೆ ಹೋಗಿ ಜಪ,

ಧ್ಯಾನ, ಹೋಮ ಇವನ್ನೆಲ್ಲ ಮಾಡಿದ ನಂತರ ವಾಪಸ್ ದಾರ್‌ಚೆನ್‌ಗೆ ಬಂದೆವು. ಅಲ್ಲಿ ಮತ್ತೆ ಒಂದೆರಡು ದಿವಸ ಬದಲಾದ ಹವಾಮಾನಕ್ಕೆ ಒಗ್ಗಿಕೊಂಡ ಮೇಲೆ, ನಾವು ಕೈಲಾಸ ಪರಿಕ್ರಮ ಮಾಡಲು ಹೊರಟೆವು. ಪರಿಕ್ರಮ ಎಂದರೆ ಪ್ರದಕ್ಷಿಣೆ. ಪ್ರದಕ್ಷಿಣೆ ಯಲ್ಲಿ ಮೊದಲನೆಯ ದಿವಸ ಸುಮಾರು ೨೦ ಕಿ.ಮೀ. ದೂರ ನಡೆಯಬೇಕು. ಅಲ್ಲಿ ರಸ್ತೆಗಳಿಲ್ಲ. ಜನ ನಡೆದ ದಾರಿ ಅಷ್ಟೆ. ತುಂಬ ಜನವೆಲ್ಲ ಹೋದರೆ ಹೇಗೆ ಕಾಣಿಸುತ್ತದೆಯೋ ಹಾಗೆ. ರಸ್ತೆಯ ಹಾಗೆ ಅಲ್ಲಿ ಯಾವುದೂ ಇಲ್ಲ. ಹಾಗಾಗಿ ಸಾಮಾನ್ಯವಾಗಿ ಎಷ್ಟೋ ಜನರು ಕುದುರೆ ಮೇಲೆ, ಅದಾದ ಮೇಲೆ ಅಲ್ಲಿ ಯಾಕ್ ಎಂಬ ಪ್ರಾಣಿ ಇದೆ, ಅದರ ಮೇಲೆ ಹೋಗುತ್ತಾರೆ. ಯಾಕ್ ಪ್ರಾಣಿಯ ಹಾಲನ್ನು ಜನರು ಕುಡಿಯುತ್ತಾರೆ. ಅಲ್ಲಿಯ ಜನ ಅದರ ಹಾಲನ್ನು ತುಪ್ಪ ಮಾಡಿ ದೀಪ ಹಚ್ಚಿಸುವುದಕ್ಕೆಲ್ಲ ಬಳಸುತ್ತಾರೆ. ಅದನ್ನು ಯಾಕ್ ಬಟರ್ (ಚಮರೀ ತುಪ್ಪ) ಅಂಥ ಹೇಳುತ್ತಾರೆ. ಯಾಕ್ ಅದನ್ನು ಸಾಮಾನು ಸಾಗಿಸುವುದಕ್ಕೆ ಮತ್ತೆ ಸವಾರಿ ಮಾಡುವುದಕ್ಕೆ ಕೂಡ ಉಪಯೋಗಿಸುತ್ತಾರೆ. ಅದನ್ನು ಕುದುರೆಗಳಷ್ಟು ಚೆನ್ನಾಗಿ ಪಳಗಿಸಲು ಆಗುವುದಿಲ್ಲ. ಕೆಲವೊಮ್ಮೆ ಅವು ವಿಚಿತ್ರವಾಗಿ ವರ್ತಿಸು ತ್ತವೆ. ಆದರೂ ಅವನ್ನು ಪ್ರಯಾಣ ಮಾಡಲು ಉಪಯೋಗಿಸು ತ್ತಾರೆ. ನಾನು ಅಲ್ಲಿಗೆ ಹೋಗುವುದಕ್ಕೆ ಮೊದಲು ಸುಮಾರು ಆರು ತಿಂಗಳು ಕಾಲ ಪ್ರತಿದಿವಸ ವಾಕಿಂಗ್, ಒಂದು ದಿನಕ್ಕೆ ಒಂದು ಸಾವಿರ ಮೆಟ್ಟಿಲು ಹತ್ತಿ ಇಳಿದು ಹತ್ತಿ ಇಳಿದು ಅಭ್ಯಾಸ ಮಾಡಿದ್ದ ರಿಂದ ನನಗೆ ನಡೆದುಕೊಂಡು ಹೋಗುವುದಕ್ಕೆ ಆಯಿತು. ಕಾಲು ನಡಿಗೆಯಲ್ಲಿಯೇ ಕೈಲಾಸ ಪರ್ವತದ ಪ್ರದಕ್ಷಿಣೆ ಮಾಡಲು ಸಾಧ್ಯ ವಾಯಿತು. ಹೀಗಾಗಿ ಒಂದು ಸಣ್ಣ ಬ್ಯಾಗ್ ಹಿಡಿದುಕೊಂಡು ಅದರಲ್ಲಿ ಕುಡಿಯುವುದಕ್ಕೆ ನೀರು ಇಟ್ಟುಕೊಂಡು ಅಲ್ಲಿಂದ ಹೊರ ಟೆವು. ಬೆಳಿಗ್ಗೆ ಹೊರಟು, ಸಂಜೆ ಸುಮಾರು ೫-೬ ಗಂಟೆ ಹೊತ್ತಿಗೆ, ಕೈಲಾಸ ಪರ್ವತದ ಉತ್ತರ ಭಾಗವನ್ನು ತಲುಪಿದೆವು. ಅದಕ್ಕೆ ದೇಹರಪುರ, ಎಂದು ಕರೆಯುತ್ತಾರೆ. ಅಲ್ಲಿ ಮಣ್ಣಿನಿಂದ ಮಾಡಿದ ಮನೆಗಳೆಲ್ಲ ಇವೆ. ಅಲ್ಲಿ ರಾತ್ರಿ ಉಳಿದುಕೊಳ್ಳಲು ವ್ಯವಸ್ಥೆ ಇದೆ. ಒಂದು ವೇಳೆ ಅದು ಸಿಗದೇ ಹೋದರೆ ಟೆಂಟ್‌ನಲ್ಲಿ ಉಳಿಯ ಬೇಕಾಗುತ್ತದೆ. ಟೆಂಟಿನಲ್ಲಿ ಬಹಳ ಚಳಿಯಾಗುತ್ತದೆ. ಮಣ್ಣಿನ ಮನೆಯಲ್ಲಿ ಚಳಿಯೇ ಆಗುವುದಿಲ್ಲ ಅಂತ ಅಲ್ಲ, ಆದರೆ ಇದಕ್ಕಿಂತ (ಟೆಂಟ್‌ಗಿಂತ) ಬಹಳ ಚೆನ್ನಾಗಿ ಇರುತ್ತದೆ. ಅಲ್ಲಿಗೆ ಸಾಯಂಕಾಲ ೬ ಗಂಟೆಗೆ ತಲುಪಿದ್ದೆವು. ಅಲ್ಲಿಯೂ ಕೂಡ ಉತ್ತರದ ಕಡೆಯಿಂದ ಕೈಲಾಸಪತಿಯ ಹತ್ತಿರವಿದ್ದ ಹಾಗೆ, ಕೈಗೆ ಎಟುಕುವಷ್ಟು ಹತ್ತಿರ ವಿದ್ದ ಹಾಗೆ ಅನ್ನಿಸುತ್ತದೆ. ಆದರೆ ಹತ್ತಿರಕ್ಕೆ ಹೋಗಿ ನೋಡಿದರೆ ಸುಮಾರು ಒಂದು ಅರ್ಧಗಂಟೆ ನಡೆದರೂ ಇನ್ನೂ ಅಷ್ಟೇ ದೂರ ಇರುವಂತೆ ಕಾಣುತ್ತದೆ. ಪರ್ವತ ಬಹಳ ಎತ್ತರವಾದುದು, ಐಸ್ ತುಂಬಿಕೊಂಡಿರುವುದರಿಂದ ನಮಗೆ ಬೆಟ್ಟದ ಪ್ರದೇಶದಲ್ಲಿ ದೂರ ಕಣ್ಣಿನ ಅಂದಾಜಿಗೆ ಸಿಗುವುದಿಲ್ಲ. ಹೀಗಾಗಿ ಅಲ್ಲಿ ಕೈಲಾಸಪತಿಯ ದರ್ಶನ ಮಾಡಿ, ಹೋಮ ಇತ್ಯಾದಿ ಮಾಡಿ ಅದಾದ ಮೇಲೆ ರಾತ್ರಿ ಅಲ್ಲೇ ಇದ್ದು, ಬೆಳಿಗ್ಗೆ ಎದ್ದು ಹೊರಟೆವು. ಬೆಳಿಗ್ಗೆ ಹೊರಡುವಾಗ ಬಹಳ ಸುಂದರವಾದ ದೃಶ್ಯ ಕಂಡುಬಂತು. ಕೈಲಾಸ ರಾತ್ರಿ ಬಹಳ ಶಾಂತ, ಅಲ್ಲಿ ಏನೂ ಶಬ್ದ ಇರುವುದಿಲ್ಲ. ಸ್ವಲ್ಪ ಹೊತ್ತು ಜಪ ಮಾಡುವಷ್ಟರಲ್ಲಿ ನಿದ್ದೆ ಬಂದುಬಿಡುತ್ತದೆ. ಇಡೀ ದಿವಸ ನಡೆದು ಆಯಾಸವಾಗಿದ್ದರಿಂದ ಹಾಗಾಯಿತು. ಬೆಳಗ್ಗೆ ಎದ್ದ ಮೇಲೆ ಅವರು ತಿನ್ನುವುದಕ್ಕೆ ತಿಂಡಿ ಕೊಟ್ಟರು. ಅದನ್ನು ತಿಂದಾದ ಬಳಿಕ ಹೊರಟೆವು. ಎರಡನೇ ದಿವಸ ಬಹಳ ಕಷ್ಟವಾಗಿರುತ್ತದೆ. ಏಕೆಂದರೆ ಬೆಟ್ಟವನ್ನು ಹತ್ತಿ ಹೋಗುವುದು, ನಡೆಯುವುದಕ್ಕೆ ಕೆಲವೊಮ್ಮೆ ಬೆಟ್ಟ ಬಹಳ ಕಡಿದಾಗಿರುತ್ತದೆ. ಅಲ್ಲಿ ಯಾವುದೇ ರಸ್ತೆಗಳಲ್ಲಿ ಸುಮ್ಮನೆ



ಬೆಟ್ಟ ಹತ್ತಿಕೊಂಡು ಹೋಗುತ್ತಾ ಇರಬೇಕು. ಬೆಳಿಗ್ಗೆ ಸೂರ್ಯೋ ದಯವಾಗುವಾಗ ಸೂರ್ಯನ ಮೊದಲನೆಯ ಕಿರಣ ಕೈಲಾಸ ಪರ್ವತದ ಮೇಲೆ ಬಿದ್ದಾಗ, ಆ ದೃಶ್ಯ ಬಹಳ ಸುಂದರವಾಗಿ ಕಂಡುಬಂತು. ಸೂರ್ಯನ ಕಿರಣದಿಂದಾಗಿ ಪರ್ವತದ ಮೇಲೆ ಇರುವ ಮಂಜು ಆವಿಯಾಗಿ ಹೋಗುತ್ತಿತ್ತು. ಬೆಳಗಿನ ಮೊದಲ ನೆಯ ಸೂರ್ಯಕಿರಣ ಬೆಟ್ಟದ ಮೇಲೆ ಬಿದ್ದಾಗ ಅಗ್ನಿಯಂತೆ ಕೆಂಪು ಬಣ್ಣವಾಗಿ ಕಾಣಿಸುತ್ತದೆ. ಅಥವಾ ಬಂಗಾರದ ಬಣ್ಣವಾಗಿ ಕಾಣಿಸು ತ್ತದೆ. ಅದೂ ಕೂಡ ಒಂದು ತರಹ ಹೋಮ ಮಾಡುತ್ತಿರುವಂತೆ ಕಾಣಿಸುತ್ತಾ ಇತ್ತು. ಕೈಲಾಸಪತಿಯ ತಲೆಯ ಮೇಲೆ ಹೋಮ ಮಾಡುತ್ತಿರುವಂತೆ ಕಾಣಿಸುತ್ತಾ ಇತ್ತು. ಆ ದೃಶ್ಯ ಬಹಳ ಸುಂದರ ವಾಗಿತ್ತು. ಅದನ್ನು ನೋಡಿಕೊಂಡ ನಂತರ ಅಲ್ಲಿಂದ ನಡೆದು ಕೊಂಡು ನಿಧಾನವಾಗಿ ಹೋಗುತ್ತಾ ಒಂದು ಸ್ಥಳವನ್ನು ತಲುಪಿ ದೆವು. ದೋಲ್ಮಾ ಲಾ ಪಾಸ್ ಅಂತ, ಅದರ ಎತ್ತರ ೧೮,೬೦೦ ಅಡಿ. ಕೈಲಾಸ ಪ್ರದಕ್ಷಿಣೆಯಲ್ಲಿ ಅದು ಎಲ್ಲಕ್ಕಿಂತ ಎತ್ತರ. ಕೈಲಾಸ ಪರ್ವ ತದ ಎತ್ತರ ೨೧,೦೦೦ಕ್ಕಿಂತಲೂ ಹೆಚ್ಚು ಅಡಿ. ಈ ಪ್ರದಕ್ಷಿಣೆ ಸಮಯದಲ್ಲಿ ಎಲ್ಲಕ್ಕಿಂತ ಎತ್ತರದ ಜಾಗವೇ ೧೮,೬೦೦ ಅಡಿ. ದೋಲ್ಮಾ ಲಾ ಪಾಸ್ ಹತ್ತಿರವೇ ಒಂದು ಗೌರೀಕುಂಡವಿದೆ. ೩೬೫ ದಿವಸಗಳೂ ಅದರಲ್ಲಿ ನೀರು ಇರುತ್ತದೆ. ಅಲ್ಲಿಗೆ ಸ್ವಲ್ಪ ಕೆಳಗೆ ಇಳಿದು ಹೋಗಬೇಕು. ಗೌರೀಕುಂಡ ತುಂಬ ಪವಿತ್ರವೆಂದು ಅವರು ಭಾವಿಸುತ್ತಾರೆ. ಹೀಗಾಗಿ ಅಲ್ಲಿ ನೀರನ್ನು ಸ್ಪರ್ಶಮಾಡಿ ಅದಾದ ಮೇಲೆ ತಲೆಗೆಲ್ಲ ನೀರನ್ನು ಚಿಮುಕಿಸಿಕೊಂಡು, ನಂತರ ಅಲ್ಲಿಂದ

ಮುಂದೆ ಹೊರಟಿದ್ದಾಯಿತು. ಈ ಕೈಲಾಸ ಪರಿಕ್ರಮದ ಒಂದು ವಿಶೇಷತೆ ಏನೆಂದರೆ ಕೈಲಾಸ ಕೇವಲ ಹಿಂದೂಗಳಿಗೆ ಮಾತ್ರವಲ್ಲ; ಜೈನರಿಗೆ, ಬೌದ್ಧರಿಗೆ ಕೂಡ ಕೈಲಾಸ ಬಹಳ ಪವಿತ್ರವಾದ ಸ್ಥಳ. ಟಿಬೆಟಿನ ಬೌದ್ಧರು ಕೈಲಾಸ ಪ್ರದಕ್ಷಿಣೆಯನ್ನು ಮಾಡುತ್ತಾರೆ. ಜೈನರೂ ಕೂಡ ಮಾಡುತ್ತಾರೆ. ಬೌದ್ಧರಲ್ಲಿ ಕೆಲವರಿಗೆ ಎಷ್ಟೊಂದು ಭಕ್ತಿಯೆಂದರೆ, ಅವರು ಪ್ರಣಾಮವನ್ನು ಮಾಡುತ್ತಾ ಪ್ರದಕ್ಷಿಣೆ ಮಾಡುತ್ತಾರೆ. ಹೇಗೆ ಎಂದರೆ: ನಿಂತುಕೊಳ್ಳುವುದು, ಬಳಿಕ ಸಾಷ್ಟಾಂಗ ಪ್ರಣಾಮ ಮಾಡುವುದು. ಆಮೇಲೆ ಕೈಯಲ್ಲಿ ಒಂದು ಕೋಲು ಇರುತ್ತದೆ. ಕೋಲನ್ನು ಇಟ್ಟಿರುತ್ತಾರೆ. ಇಟ್ಟ ಮೇಲೆ ಆ ಕೋಲು ಇರುವಂತಹ ಜಾಗದಲ್ಲಿ ಹೋಗಿ ನಿಂತುಕೊಂಡು, ಪುನಃ ಕೋಲ ನ್ನು ಹಿಡಿದುಕೊಂಡು ಇನ್ನೊಂದು ಸಾಷ್ಟಾಂಗ ನಮಸ್ಕಾರ ಮಾಡು ತ್ತಾರೆ. ಪ್ರಣಾಮ ಮಾಡಿ, ಕೈ ಎಲ್ಲಿಯತನಕ ಎಟುಕುವುದೋ ಅಲ್ಲಿಯ ತನಕ ಕೋಲನ್ನು ಇಡುವುದು. ಪುನಃ ಎದ್ದು ನಿಂತು ಕೊಂಡು ಆ ಕೋಲು ಇರುವ ಜಾಗದಲ್ಲಿ ನಿಂತುಕೊಂಡು, ಆ ಕೋಲನ್ನು ಕೈಲ್ಲಿಟ್ಟುಕೊಂಡು ಮತ್ತೆ ಪ್ರಣಾಮ ಮಾಡುತ್ತಾರೆ. ಅದು ಎಷ್ಟು ದೂರ ಎಟಕುತ್ತದೆಯೋ ಅಷ್ಟು ದೂರ ಕೋಲನ್ನು ಇಡುತ್ತಾರೆ. ಈ ರೀತಿ ಕೈಲಾಸದ ಪ್ರದಕ್ಷಿಣೆ ಮಾಡುವುದನ್ನು ನಾನು ನೋಡಿದ್ದೇನೆ. ಹೀಗಾಗಿ ಅವರಿಗೆ ಎಂತಹ ಶ್ರದ್ಧೆ ಎಂತಹ ಭಕ್ತಿ ಎಂದರೆ ಅದನ್ನು ವಿವರಿಸಲಾಗದು. ನಾವು ಸಾಮಾನ್ಯವಾಗಿ ವಿಷ್ಣು ವೈಕುಂಠದಲ್ಲಿ, ಬ್ರಹ್ಮ ದೇವ ಬ್ರಹ್ಮಲೋಕದಲ್ಲಿ, ಶಿವ ಕೈಲಾಸದಲ್ಲಿ ಇರುತ್ತಾನೆಂದು ನಂಬುತ್ತೇವೆ. ಪುರಾಣದಲ್ಲಿ ಕೂಡ ಇದೇ ರೀತಿ ಹೇಳಿದೆ. ಹೀಗಾಗಿ ಅತ್ಯಂತ ಪವಿತ್ರವಾಗಿರುವ ಆ ಕೈಲಾಸ ಪರ್ವ ತಕ್ಕೆ ಪ್ರದಕ್ಷಿಣೆ ಮಾಡುವುದೆಂದರೆ ಮನಸ್ಸಿನಲ್ಲಿ ಪವಿತ್ರವಾದ ಭಾವನೆ ಕೂಡ ಬರುತ್ತದೆ. ಪ್ರದಕ್ಷಿಣೆಯ ಎರಡನೇ ದಿನ ಸುಮಾರು ೩೫ ಕಿ.ಮೀ. ನಡೆಯಬೇಕು. ನಡೆದು ನಡೆದು ಕೊನೆಗೆ ಅಲ್ಲಿಂದ ಕೈಲಾಸದ ಪೂರ್ವದಿಕ್ಕಿನಲ್ಲಿ ಬರುವ ಟ್ಯುಬೇಲ್ ಪೀಕ್ ತಲುಪ ಬೇಕು. ಅಲ್ಲಿ ಕೂಡ ಕೆಲವು ಮಣ್ಣಿನ ಮನೆಗಳಿವೆ. ಅಲ್ಲಿ ನಮಗೆ ರಾತ್ರಿ ತಂಗುವುದಕ್ಕೆ ವ್ಯವಸ್ಥೆ ಮಾಡಿದ್ದರು. ನಾವು ಅಲ್ಲಿಗೆ ತಲುಪಿದ ಬಳಿಕ ನಮ್ಮ ಟ್ರಾವೆಲ್ ಏಜೆನ್ಸಿಯವರು ಅಲ್ಲಿ ಇದ್ದರು. ರಾತ್ರಿ ಊಟಕ್ಕೆ ಅವರು ಏನೋ ಅಡಿಗೆ ಮಾಡಿದ್ದರು. ಅದನ್ನು ತಿಂದೆವು. ಬೇರೆಯವರು ಬರುವುದಕ್ಕಿಂತ ಮೊದಲೇ ನಾನು ಅಲ್ಲಿ ಹೋಗಿ ಮುಟ್ಟಿದ್ದೆ. ಎಷ್ಟೊಂದು ಆಯಾಸವಾಗಿತ್ತೆಂದರೆ ಬೆಳಗಾದ ಮೇಲೆ ಎಚ್ಚರವಾದಾಗಲೇ ನನಗೆ ಅರಿವಾಯಿತು. ಹೀಗಾಗಿ ಈ ಒಂದು ಪರಿಶ್ರಮ ನನ್ನ ಮನಸ್ಸಿಗೆ ಬಹಳ ಆನಂದವನ್ನು ನೀಡಿತು. ಶರೀರದ ಪರಿಶ್ರಮ ಎಷ್ಟು ಆಗುತ್ತದೆಯೋ ಅಷ್ಟೇ ಮನಸ್ಸಿಗೆ ಆನಂದವಾಗು ತ್ತದೆ. ಅಲ್ಲಿಂದ ಜೂತುಲ್ ಪು ತಲುಪಿ, ಅಲ್ಲಿಂದ ಬೆಳಿಗ್ಗೆ ಎದ್ದು ಮತ್ತೆ ಪುನಃ ಹೊರಟು ಸುಮಾರು ಮಧ್ಯಾಹ್ನದ ಹೊತ್ತಿಗೆ ಬಂದು ಮುಟ್ಟಿದೆವು. ಈ ಒಂದು ಯಾತ್ರೆಯನ್ನು ಮಾಡಿದಾಗ ಮನಸ್ಸಿನಲ್ಲಿ ಎಷ್ಟೊಂದು ಸಂತೋಷವಾಗುತ್ತದೆ, ಎಂದರೆ ಮನಸ್ಸು ಭಾವುಕ ವಾಗುತ್ತದೆ. ನಂತರ ನಾವು ಮುಂದೆ ಹೊರಟು, ನಮ್ಮ ಮರು ಪ್ರಯಾಣ ಪ್ರಾರಂಭವಾಯಿತು. ಮೊದಲು ಕೈಲಾಸದಿಂದ ಹೊರಟು ಸಾಗಾ ಎಂಬ ಒಂದು ಸ್ಥಳದಲ್ಲಿ ಬ್ರಹ್ಮಪುತ್ರ ನದಿಯನ್ನು ದಾಟ ಬೇಕು. ಹೀಗಾಗಿ ಸಾಗದಲ್ಲಿ ಒಂದು ರಾತ್ರಿ ಉಳಿದು, ಬೆಳಿಗ್ಗೆ ಎದ್ದು ಬ್ರಹ್ಮಪುತ್ರ ನದಿಯನ್ನು ದಾಟಿ ಅಲ್ಲಿಂದ ಮುಂದೆ ಹೊರಟೆವು. ಟಿಬೆಟ್‌ನ ದಕ್ಷಿಣ ಭಾಗದಲ್ಲಿ ನ್ಯಾಲಂ ಎಂಬ ಸ್ಥಳವಿದೆ. ಅಲ್ಲಿ ಒಂದು ರಾತ್ರಿ ಇದ್ದು ಅದಾದ ಮೇಲೆ ಅಲ್ಲಿಂದ ನೇಪಾಳವನ್ನು ಪ್ರವೇಶ ಮಾಡಿದೆವು. ನೇಪಾಳದ ಗಡಿಯಲ್ಲಿ 'ಸ್ನೇಹಸೇತುವೆ' ಯಿದೆ. ಅದನ್ನು ದಾಟಿ, ಅಲ್ಲಿಂದ ನಂತರ ನಾವು ಕಾಠ್ಮಂಡುವಿಗೆ ರಾತ್ರಿ ಬಂದೆವು. ಎರಡು ದಿವಸವಾದ ಮೇಲೆ ಅಲ್ಲಿಂದ ವಾರಾ ಣಸಿಗೆ ವಿಮಾನದಲ್ಲಿ ಬಂದು, ನಂತರ, ವಾರಣಾಸಿಯಲ್ಲಿ ಕಾಶಿ ವಿಶ್ವನಾಥನಿಗೆ ಮಾನಸ ಸರೋವರದಿಂದ ತಂದ ನೀರನ್ನು ಅಭಿಷೇಕ ಮಾಡಿದೆವು. ಹೀಗಾಗಿ ಮಾನಸ ಸರೋವರದಲ್ಲಿ ಸ್ನಾನ ಮಾಡಿ ರುವ ಅನುಭವ, ಕೈಲಾಸಪತಿಯ ದರ್ಶನ, ಕೈಲಾಸವನ್ನು ನೇರ ವಾಗಿ ನೋಡಿದ ಅನುಭವ ಅವಿಸ್ಮರಣೀಯ. ಅಷ್ಟಪಾದದಲ್ಲೇ ಹೋಗುವಾಗ ಬೆಟ್ಟದ ಹಿಂದಿನಿಂದ ಹೋಗುತ್ತೇವೆ. ಅಂದರೆ ಬೆಟ್ಟ ನಮಗೆ ಅಡ್ಡ ಬರುತ್ತದೆ. ಅದಾದ ಮೇಲೆ, ಅಷ್ಟಪಾದಕ್ಕೆ ಸ್ಥಳಕ್ಕೆ ಹೋಗುವಾಗ ಇದ್ದಕ್ಕಿದ್ದಂತೆ ಕೈಲಾಸಪತಿಯು ಕಣ್ಣೆದುರಿಗೆ ಕಾಣಿಸು ತ್ತಾನೆ.

ನಮಗೆ ನಿಜವಾಗಿಯೂ ಆ ಶಿವನ ದರ್ಶನವಾದ ಹಾಗೆ ಅನ್ನಿಸುತ್ತದೆ. ಅದು ಎಂತಹ ಆನಂದವನ್ನು ಕೊಡುತ್ತದೆ ಎಂದರೆ, ಎಲ್ಲ ಪರಿಶ್ರಮದ ಮಧ್ಯದಲ್ಲಿ ಆ ಒಂದು ಸಂತೋಷ ಶ್ರಮವನ್ನು ನೀಗುತ್ತದೆ. ಹೀಗಾಗಿ ಮಾನಸ ಸರೋವರದಿಂದ ಕೈಲಾಸ ದರ್ಶನ ಮಾಡಿಕೊಂಡು, ಮಾನಸ ಸರೋವರ ಪವಿತ್ರ ಜಲವನ್ನು ತಂದು ಕಾಶಿಯಲ್ಲಿ ವಿಶ್ವನಾಥನಿಗೆ ಅಭಿಷೇಕ ಮಾಡಿ, ನಮ್ಮ ಈ ಕೈಲಾಸ ಯಾತ್ರೆಯನ್ನು ಮುಗಿಸಿದೆವು. ನಾನು ಈಗಲೂ ಕೂಡ ಯಾವಾಗ ಲಾದರೂ ಸಮಯ ಸಿಕ್ಕಾಗ ಆ ಕೈಲಾಸ ಯಾತ್ರೆಯನ್ನು ನೆನಪು ಮಾಡಿಕೊಳ್ಳತ್ತೇನೆ. ಆಗ ಇನ್ನೊಂದು ಸಲ ಕೈಲಾಸ ಯಾತ್ರೆಗೆ ಹೋದಂತೆ ಆಗುತ್ತದೆ. ಯಾತ್ರೆಯನ್ನು ನೆನಪಿಸಿಕೊಂಡಾಗ ಈಗಲೂ ಆ ಚಿತ್ರ ಕಣ್ಣುಮುಂದೆ ಕಟ್ಟಿದಂತೆ, ಕಣ್ಣ ಮುಂದೆ ಇದ್ದಂತೆ ಅನ್ನಿಸು ತ್ತದೆ. ಮನಸ್ಸಿಗೆ ಅದು ಬಹಳ ಆನಂದವನ್ನು ನೀಡುತ್ತದೆ. ಈ ಬಾರಿ ನಾನು ಅದರ ಬಗ್ಗೆ ಚಿಂತನೆ ಮಾಡಿದಾಗಲೂ ಬಹಳ ಆನಂದ ಉಂಟಾಗಿದೆ. ಅದಲ್ಲದೆ, ಮುಂಬೈಯಿಂದ ಒಬ್ಬರು ಭಕ್ತರು ನನ ಗೊಂದು ಡಿಜಿಟಲ್ ಕ್ಯಾಮರಾ ಕೊಟ್ಟಿದ್ದರು. ಅದರಿಂದ ಕೆಲವು ಫೋಟೋಗಳನ್ನು ತೆಗೆದುಕೊಂಡಿದ್ದೆ. ಅದಾದ ಮೇಲೆ ೨೦೦೪ ರಲ್ಲಿ ಮಂಗಳೂರಿಗೆ ಬಂದ ಮೇಲೆ ಮಂಗಳೂರು ಆಶ್ರಮದಲ್ಲಿ ಒಂದೆರಡು ಸಲ ಸ್ಲೈಡ್ ಶೋ ಕೂಡ ಮಾಡಿದ್ದೆ. ಭಕ್ತರೂ ಕೂಡ ಅದನ್ನು ನೋಡಿ ಬಹಳ ಆನಂದಪಟ್ಟಿದ್ದರು. ಹೀಗಾಗಿ ಈ ಕೈಲಾಸ ಯಾತ್ರೆ ನಾನು ಮಾಡಿರುವಂತಹ ಶ್ರೇಷ್ಠ ತೀರ್ಥಯಾತ್ರೆಗಳಲ್ಲಿ ಒಂದೆಂದು ನಾನು ಭಾವಿಸುತ್ತೇನೆ. ಈ ಯಾತ್ರೆಯನ್ನು ಮಾಡಲು ಗುರುಮಹಾರಾಜರ ಕೃಪೆಯಿಂದಲೇ ಸಾಧ್ಯವಾಯಿತು ಎಂದು ಹೇಳುತ್ತೇನೆ. ಈಗಲೂ ನಾನು ಸಮಯ ಸಿಕ್ಕಾಗ ಒಂದು ಅರ್ಧ ಗಂಟೆ ಕುಳಿತುಕೊಂಡು, ಮಾನಸಿಕವಾಗಿ ಕೈಲಾಸ ಯಾತ್ರೆಯನ್ನು ಮಾಡಿ ಬರುತ್ತೇನೆ. ಅದು ಆನಂದವನ್ನು ನೀಡುತ್ತದೆ. ✽